

ಯಶಸ್ವಿ ಮಕ್ಕಳನ್ನು ಬೆಳೆಸುವುದು ಹೇಗೆ? ಪೋಷಕರನ್ನು ಮತ್ತೆ ಮತ್ತೆ ಕಾಡುವ ಈ ಪ್ರಶ್ನೆ ಮಕ್ಕಳು ಮತ್ತು ಪಾಲಕರ ಮೇಲೆ ಅನಗತ್ಯ ಒತ್ತಡ ಉಂಟು ಮಾಡಬಲ್ಲದು.

# ಗೆಲುವು ಮಕ್ಕಳದೇ ಆಗಲಿ... ನಾವು ಸೋತರೂ ಪರವಾಗಿಲ್ಲ!

■ ಸ್ವಯಂಪ್ರಭಾ

ಜಾಣ ಮಗುವಿಗಾಗಿ ದೇವರಿಗೆ ಹರಕೆ; ವ್ರತ–ಆಚರಣೆಯ ಮೂಲಕ ಗಣಿತದಲ್ಲಿ ಭಾರೀ ಹುಷಾರಾಗಿರುವ ಮಗುವಿನ ನಿರೀಕ್ಷೆ; ನಾಯಕತ್ವದ ಗುಣಗಳ ಮಗುವಿನ ಅಪೇಕ್ಷೆ – ಇವೆಲ್ಲ ತಂದೆ–ತಾಯಿಯರಲ್ಲಿ ಇರುವ ಸಾಮಾನ್ಯ ಬಯಕೆಗಳು. ತಮ್ಮ ಮಕ್ಕಳು ಜಾಣರಾಗಬೇಕು, ಪ್ರಸಿದ್ಧರಾಗಬೇಕು ಎಂಬ ಇಚ್ಛೆ ಎಲ್ಲ ಪಾಲಕರಿಗೂ ಇರುತ್ತದೆ. ಹಾಗೊಂದು ಒಳಿತಿನ ಆಶಯ ಇರಬೇಕು ಕೂಡ. ಆದರೆ, ಅದರಲ್ಲೊಂದು ಮುಕ್ತವಾದ ಅವಕಾಶವೂ ಇರಬೇಕು. ಕೇವಲ ಯಶಸ್ವಿ ಜನರಿಂದಲೇ ಜಗತ್ತು ತುಂಬಿ ತುಳುಕುವುದು ಹೇಗೆ ಸಾಧ್ಯವಿಲ್ಲವೋ, ಅದೇ ರೀತಿ ಮಕ್ಕಳೂ ಕೇವಲ ಯಶಸ್ಸಿನ ಕಿರೀಟ ಹೊತ್ತುಕೊಂಡೇ ತಿರುಗುವುದು ಸಾಧ್ಯವಿಲ್ಲ.

ಚಾಂದಿನಿಗೆ ತನ್ನ ಮಗ ತಬಲಾ ಕಲಾವಿದ ಆಗಿಯೇ ಆಗುತ್ತಾನೆ ಎಂಬ ನಿರೀಕ್ಷೆ. ಅವಳ ನಂಬಿಕೆಯ ಹಿಂದೊಂದು ಕತೆಯಿದೆ. ಆಕೆ ಗರ್ಭಿಣಿಯಾಗಿದ್ದಾಗ ಆಕೆಯ ದೊಡ್ಡ ಮಾವ ತೀರಿಕೊಂಡಿದ್ದರು. ಅವರು ಆ ಭಾಗದ ಪ್ರಸಿದ್ಧ ತಬಲಾ ವಾದಕರಾಗಿದ್ದರು. ತನ್ನ ದೊಡ್ಡ ಮಾವನೇ ತನ್ನ ಹೊಟ್ಟೆಯಲ್ಲಿ ಮತ್ತೆ ಹುಟ್ಟಿ ಬರುತ್ತಾರೆ ಎಂಬ ಬಲವಾದ ನಂಬಿಕೆ ಚಾಂದಿನಿಯದು. ಆಕೆಯ ಯೋಚನೆಗೆ ತಕ್ಕಂತೆಯೇ ಅವಳಿಗೆ ಗಂಡು ಮಗು ಹುಟ್ಟಿತು. ಅಷ್ಟೇ ಅಲ್ಲ, ಮಾವನ ಬೆನ್ನಿನಲ್ಲಿ ಇದ್ದಂತಹುದೇ ರೀತಿಯ ಮಚ್ಚೆಯೊಂದು ಮಗುವಿನ ಬೆನ್ನಿನಲ್ಲಿಯೂ ಇತ್ತು. ಹಾಗಾಗಿ ಈ ಮಗು ತನ್ನ ದೊಡ್ಡಜ್ಜನಂತೆಯೇ ಕಲಾವಿದನಾಗಿ ಪ್ರಸಿದ್ಧನಾಗುತ್ತಾನೆ ಎಂದವಳು ನಂಬಿದ್ದಳು. ಅವಳ ಮಾತನ್ನು ಮನೆಯವರೂ ನಂಬುವಷ್ಟರ ಮಟ್ಟಿಗೆ ಮನೆಯಲ್ಲಿ ಮಾತುಕತೆಗಳು ನಡೆಯುತ್ತಿದ್ದವು.

ಚಾಂದಿನಿ ತನ್ನ ಮಗ ಸುಮಂತ್‌ಗೆ ಚಿಕ್ಕಂದಿನಲ್ಲಿಯೇ ತಬಲಾ ತಂದುಕೊಟ್ಟಿದ್ದಳು. ಅವನೂ ಚಿಕ್ಕಂದಿನಲ್ಲಿ ತಕ್ಕಮಟ್ಟಿಗೆ ತಬಲಾ ನುಡಿಸುವುದನ್ನು ಕಲಿತಿದ್ದ. ಆದರೆ, ಏಳನೇ ತರಗತಿಗೆ ಬರುವ ಹೊತ್ತಿಗೆ ಅವನಿಗೆ ತಬಲಾವೆಂದರೆ ಅಷ್ಟೇನೂ ಇಷ್ಟವಾಗುತ್ತಿರಲಿಲ್ಲ. ದಿನಬೆಳಗಾದರೆ ತಬಲಾ ನುಡಿಸುತ್ತ ಖುಷಿಯಾಗಿದ್ದವನು, ಬರಬರುತ್ತಾ, ಅಮ್ಮ ಬೈದಾಗ ಮಾತ್ರ ತಬಲಾದ ಮುಂದೆ ಕೂರುತ್ತಿದ್ದ. ತಾನು ಬ್ಯಾಸ್ಕೆಟ್ ಬಾಲ್ ಪ್ಲೇಯರ್ ಆಗಬೇಕು ಎಂಬ ಕನಸು ಅವನಲ್ಲಿ ಮೊಳಕೆಯೊಡೆದಿತ್ತು.

ಮನೆಯವರೆಲ್ಲರೂ ತಬಲಾ ಹೊರತಾಗಿ ಅವನಿಂದ ಹೊಸದೊಂದು ಕನಸನ್ನು ನಿರೀಕ್ಷಿಸುವ ಸ್ಥಿತಿಯಲ್ಲಿ ಇರಲಿಲ್ಲ. ಅಷ್ಟೇ ಅಲ್ಲ, ತಬಲಾದ ಹೊರತಾಗಿ ಅವನು ಹೊಸ ಕ್ಷೇತ್ರದ ಕುರಿತು ಮಾತನಾಡಬಹುದು ಎಂಬುದಕ್ಕೆ ಅವಕಾಶವೇ ಇಲ್ಲದಷ್ಟು ತೀವ್ರವಾದ ಪರೋಕ್ಷ ಒತ್ತಡವೂ ಸೃಷ್ಟಿಯಾಗಿತ್ತು. ಸಂಜೆ ತರಗತಿ ಮುಗಿದ ಕೂಡಲೇ ಅವನು ಸಂಗೀತ ಕಲಾವಿದರೊಬ್ಬರ ಜೊತೆಗೆ, ಅವರ ಕಛೇರಿಗೆ ಸಾತ್ ನೀಡುತ್ತ ತನ್ನ ಅಭ್ಯಾಸ ನಡೆಸಬೇಕಾಗಿತ್ತು. ನಿರಂತರತೆ ಮತ್ತು ಏಕತಾನತೆಯಿಂದ ಅವನ ಮನಸ್ಸು ಅಸ್ವಸ್ಥವಾಗಿತ್ತು. ಬೆಳಿಗ್ಗೆ ಶಾಲೆಗೆ ಹೋದ ಕೂಡಲೇ ಬ್ಯಾಸ್ಕೆಟ್ ಬಾಲ್ ಕೋರ್ಟ್‌ಗೆ ಓಡಿಹೋಗಿ, ಚೆಂಡಿನೊಡನೆ ಸ್ವಲ್ಪ ಹೊತ್ತು ಆಡುತ್ತಿದ್ದ. ತನ್ನೊಳಗೆ ಆ ಆಟದ ಕುರಿತು ಆಸೆ ಚಿಗುರಿದೆ ಎಂಬುದನ್ನು ಸ್ವತಃ ಗುರುತಿಸಿಕೊಳ್ಳುವುದು ಕೂಡ ಅವನಿಗೆ ಸಾಧ್ಯವಾಗುತ್ತಿರಲಿಲ್ಲ.

ಎಷ್ಟೋ ಸಂದರ್ಭದಲ್ಲಿ ಹೀಗೆಯೇ ಆಗುತ್ತದೆ. ‘ನನ್ನ ಮಗನಿಗೆ ನಾನು ಓದು... ಓದು... ಎಂದು ತೀರಾ ಒತ್ತಡ ಹೇರುವುದೇ ಇಲ್ಲ. ಅವನಿಗೆ ತಬಲಾ ಇಷ್ಟವೆಂದು ಅದಕ್ಕೆ ಸಂಬಂಧಿಸಿದ ತರಗತಿಗೇ ಹಾಕಿದ್ದೇನೆ. ಅದರಲ್ಲಿಯೇ ಅವನು ಸಾಧನೆ ಮಾಡುತ್ತಿದ್ದಾನೆ’ ಎಂದು ಪದೇ ಪದೇ ಹೇಳುತ್ತಾ, ತಮ್ಮನ್ನು ಪರೋಕ್ಷವಾಗಿ ಹೊಗಳಿಕೊಳ್ಳುವ ಪೋಷಕರಿದ್ದಾರೆ. ಆದರೆ, ವಾಸ್ತವದಲ್ಲಿ ಮಕ್ಕಳ ಮನಸ್ಸಿನಲ್ಲಿ ಬೇರೊಂದು ಕ್ಷೇತ್ರದ ಸೆಳೆತ ಇರಬಹುದು. ಅಥವಾ, ಓದಿನ ಆಯ್ಕೆಯನ್ನೇ ಗಂಭೀರವಾಗಿ ಪರಿಗಣಿಸಬೇಕು ಎಂದೂ ಅವರಿಗೆ ಅನ್ನಿಸಬಹುದು.

ಕೆಲವರು, ಓದುವುದನ್ನು ಗಂಭೀರವಾಗಿ ಪರಿಗಣಿಸುವುದೇ ತಪ್ಪು ಎಂಬರ್ಥದ ಮಾತುಗಳನ್ನು ಹೇಳುವುದುಂಟು. ಪಠ್ಯೇತರ ಚಟುವಟಿಕೆಗಳು ಎಷ್ಟೊಂದು ಮುಖ್ಯವೆಂದು ಹೇಳುತ್ತಾ, ಅಂಕಗಳಿಂದ ಏನೂ ಪ್ರಯೋಜನವಿಲ್ಲವೆಂದು ಹೀಗಳೆಯುತ್ತ ಇರುವಾಗ, ಅತ್ತ ಅಂಕಗಳನ್ನು ನಂಬಿ ಸಾಧನೆ ಮಾಡುವ ಮಕ್ಕಳ ಮನಸ್ಥಿತಿಯನ್ನೂ ಪರಿಗಣಿಸಬೇಕಲ್ಲವೇ?

ಒಂದನ್ನು ಅಟ್ಟಕ್ಕೇರಿಸುವ ಸಂದರ್ಭದಲ್ಲಿ ಮತ್ತೊಂದನ್ನು ‘ಢಮಾರ್’ ಎಂದು ಉರುಳಿಸಬಾರದು. ಅಂಕ ಗಳಿಕೆಯೂ ಸುಲಭವಾಗಿ ಲಭ್ಯವಾಗುವ ಸಾಧನೆಯ ಶಿಖರವೇನಲ್ಲ. ಹಾಗಾಗಿ ಹಿರಿಯರ ಮಾತಿನಲ್ಲಿ ಒಂದಿಷ್ಟು ಔದಾರ್ಯ, ಸಂಯಮ ಅಗತ್ಯ. ಯಶಸ್ಸಿನ ಗುಂಗು ಅಂಟಿಸಿಕೊಂಡ ಅಪ್ಪ ಅಮ್ಮಂದಿರು, ತಮ್ಮ ಅಪೇಕ್ಷೆಯನ್ನು ಎಳೆಯರ ಮೇಲೆ ಹೇರತೊಡಗಿದಾಗ, ಮಕ್ಕಳೊಡನೆ ಪ್ರೀತಿಯಿಂದ ಮಾತನಾಡುವುದೇ ಕಷ್ಟವಾಗಬಹುದು. ತಮ್ಮ ಕನಸುಗಳೊಂದಿಗೆ ಮಕ್ಕಳ ಆಸೆಗಳು ಮ್ಯಾಚ್ ಆಗದೆ ಹೋದಲ್ಲಿ, ಕಿರಿಯರನ್ನು ಒಲಿಸಿಕೊಳ್ಳುವುದು ಸಾಧ್ಯವಾಗದೆ ಹೋದಲ್ಲಿ, ಹಿರಿಯರು ಕಿರಿಯರ ದಾರಿಯಲ್ಲಿ ನಡೆಯುವುದೇ ಒಳ್ಳೆಯದು.

ಪ್ರತಿಕ್ರಿಯಿಸಿ: feedback@sudha.co.in